ಸಂಖ್ಯೆ:ಇಸಿಐ/116/ಕಾ.ನಿ.ವ/2010

ಅಬಕಾರಿ ಆಯುಕ್ತರ ಕಛೇರಿ
ಒಕ್ಕಲಿಗರ ಭವನ, ಕೆ.ಆರ್.ಸಿ.ವೃತ್ತ
ಬೆಂಗಳೂರು, ದಿನಾಂಕ:28-10-2010

**<u>ಸುತ್ತೋಲೆ</u>**

ವಿಷಯ: ಅಧಿಕಾರಿಗಳು ವಾರ್ಷಿಕ ಕಾರ್ಯನಿರ್ವಹಣಾ ವರದಿ ಹಾಗೂ ಆಸ್ತಿ ಋಣ ಪಟ್ಟಿಗಳನ್ನು ಸಲ್ಲಿಸುವ ಬಗ್ಗೆ

********

ಕರ್ನಾಟಕ ನಾಗರೀಕ ಸೇವೆಗಳು (ನಡತೆ) ನಿಯಮಗಳು 1966 ನಿಯಮ 23ರನ್ವಯ ಪ್ರತಿಯೊಬ್ಬ ಸರ್ಕಾರಿ ಅಧಿಕಾರಿಗಳು/ನೌಕರರು ತಾವು ಮತ್ತು ತಮ್ಮ ಕುಟುಂಬ ವರ್ಗದವರು ಹೊಂದಿರುವ ಆಸ್ತಿ ವಿವರವನ್ನು ಸರ್ಕಾರಿ ನಿಗದಿಪಡಿಸಿದ ನಿಗದಿತ ನಮೂನೆಗಳಲ್ಲಿ ಪ್ರತಿ ವರ್ಷ ಒದಗಿಸುವುದು ಅದ್ಯ ಕರ್ತವ್ಯವಾಗಿರುತ್ತದೆ. ಆದರೆ, ರಾಜ್ಯದ ಅಬಕಾರಿ ಜಂಟಿ ಆಯುಕ್ತರುಗಳು ಮತ್ತು ಅಬಕಾರಿ ಉಪ ಆಯುಕ್ತರುಗಳು, ಆಸ್ತಿ ವಿವರವನ್ನು ಪ್ರತಿ ವರ್ಷ ಸರ್ಕಾರಕ್ಕೆ ನೇರವಾಗಿ ಸಲ್ಲಿಸುತ್ತಿದ್ದಾರೆ.

ಕಾರ್ಯನಿರ್ವಹಣಾ ವರದಿಗಳು ನಿಯಮಗಳು 2000ರನ್ವಯ ಪ್ರತಿಯೊಬ್ಬ ಅಧಿಕಾರಿಯವರು ಏಪ್ರಿಲ್ ಅಂತ್ಯದೊಳಗೆ ಸದರಿ ಸಾಲಿನ ಕಾರ್ಯನಿರ್ವಹಣಾ ವರದಿಯನ್ನು ವರದಿ ಮಾಡುವ ಪ್ರಾಧಿಕಾರಿಯವರಿಗೆ ಸಲ್ಲಿಸಬೇಕಾಗಿರುತ್ತದೆ. ಹಾಗೂ ನಂತರದ ಪ್ರಕ್ರಿಯೆಗಳು ಆದಷ್ಟು ಜಾಗ್ರತೆ ನಡೆಯಬೇಕಾಗಿರುತ್ತದೆ. ಅದರೆ, ಈ ಇಲಾಖೆಯ ಬಹಳಷ್ಟು ಅಧಿಕಾರಿಗಳು ನಿಗದಿತ ಅವಧಿಯೊಳಗೆ ಕೆಲವೊಮ್ಮೆ ವರ್ಷಗಳಷ್ಟು ವಿಳಂಬವಾಗಿ ಕಾರ್ಯನಿರ್ವಹಣಾ ವರದಿಯನ್ನು ಸಲ್ಲಿಸುತ್ತಿರುವುದು ಕಂಡುಬಂದಿರುತ್ತದೆ. ಹೀಗಾಗಿ ನಿಯಮಗಳನ್ವಯ ಕಾರ್ಯನಿರ್ವಹಣಾ ವರದಿಗಳನ್ನು ನಿಗದಿತ ಅವಧಿಯೊಳಗೆ ಅಂಗೀಕರಿಸಲಾಗುತ್ತಿಲ್ಲ. ಈ ಕಛೇರಿಯಿಂದ ಅನೇಕ ಬಾರಿ ಪತ್ರಗಳನ್ನು ಬರೆದು ಈ ಬಗ್ಗೆ ಸಲಹೆ ಸೂಚನೆಗಳನ್ನು ನೀಡಿದ್ದರೂ ಸಹ, ಯಾವುದೇ ಸುಧಾರಣೆ ಕಂಡುಬರುತ್ತಿಲ್ಲ. ಅಧಿಕಾರಿಗಳ ಪದೋನ್ನತಿಗೆ ಪರಿಗಣಿಸಬೇಕಾದಾಗ ಕಾರ್ಯನಿರ್ವಹಣಾ ವರದಿಗಳ ಕೊರತೆಯಿಂದ ಅನಾವಶ್ಯಕ ವಿಳಂಬ/ತೊಂದರೆ ಉಂಟಾಗುತ್ತಿದೆ.

ಅಬಕಾರಿ ಉಪ ಅಧೀಕ್ಷಕರುಗಳು ಹಾಗೂ ಅಬಕಾರಿ ಅಧೀಕ್ಷಕರುಗಳು ಆಸ್ತಿ ವಿವರಗಳನ್ನು ನಿಯಮಗಳನ್ವಯ ಈ ಕಛೇರಿಯ ಹಂತದಲ್ಲಿ ಪರಿಶೀಲಿಸಿ ಅಂಗೀಕರಿಸಬೇಕಾಗಿರುತ್ತದೆ. ಅಧಿಕಾರಿಗಳು ಈ ಪ್ರಕ್ರಿಯೆಗಾಗಿ ನೇರವಾಗಿ ಕಛೇರಿಗೆ ಆಸ್ತಿ ವಿವರವನ್ನು ಒದಗಿಸಬೇಕಾಗಿರುತ್ತದೆ. ಕೆಲವೊಂದು ಅಧಿಕಾರಿಗಳು ತಮ್ಮ ನಿಯಂತ್ರಣಾಧಿಕಾರಿಗಳಿಗೆ ಸಲ್ಲಿಸುತ್ತಿದ್ದು, ಸದರಿ ಆಸ್ತಿ ವಿವರವನ್ನು ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳು ಈ ಕಛೇರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸುತ್ತಿಲ್ಲ. ಕೇವಲ ಕೆಲವು ಅಧಿಕಾರಿಗಳು ಮಾತ್ರ ಈ ಕಛೇರಿಗೆ ಸಲ್ಲಿಸುತ್ತಿದ್ದಾರೆ. ಆದುದರಿಂದ ಕಾಲಕಾಲಕ್ಕೆ ಅಬಕಾರಿ ಉಪ ಅಧೀಕ್ಷಕರುಗಳು ಹಾಗೂ ಅಬಕಾರಿ ಅಧೀಕ್ಷಕರುಗಳು ಆಸ್ತಿ ವಿವರವನ್ನು ನಿಗದಿತ ಅವಧಿಯೊಳಗೆ ಪರಿಶೀಲಿಸಿ ಅಂಗೀಕರಿಸುವುದು ಅಸಾಧ್ಯವಾಗಿರುತ್ತದೆ. ಹಾಗೂ ಈ ಸಂಬಂಧ ಸರ್ಕಾರದಿಂದ ಪದೇ ಪದೇ ನೆನಪೋಲೆಗಳು ಬರುತ್ತಿದೆ.

ಆದುದರಿಂದ ರಾಜ್ಯದ ಎಲ್ಲಾ ಜಂಟಿ ಆಯುಕ್ತರುಗಳು ಹಾಗೂ ಅಬಕಾರಿ ಉಪ ಆಯುಕ್ತರುಗಳು ಅಬಕಾರಿ ಉಪ ಅಧೀಕ್ಷಕರು ಮತ್ತು ಅಬಕಾರಿ ಅಧೀಕ್ಷಕರುಗಳು ಇನ್ನು ಮುಂದೆ ಪ್ರತಿ ವರ್ಷ ಆಸ್ತಿ ವಿವರವನ್ನು ಇಲಾಖಾಮುಖ್ಯಸ್ಥರಿಗೆ ಸಲ್ಲಿಸುವುದು. ಸುತ್ತೋಲೆಯಲ್ಲಿನ ಅಂಶಗಳನ್ನು ಜಾರಿಗೆ ತಂದು ಇಲಾಖೆಯ ಮುಖ್ಯವಾಹಿನಿಯ ಕರ್ತವ್ಯ ನಿರ್ವಹಣೆ ಸುಗಮವಾಗಿ ನಡೆಯುವಲ್ಲಿ ಕೈಜೋಡಿಸಲು ಅಗತ್ಯ ಕ್ರಮ ಜರುಗಿಸಲು ನಿರ್ದೇಶನ ನೀಡಲಾಗಿದೆ.

ಸಹಿ/-

(ಅರವಿಂದ ಜನ್ನು)

**ಅಬಕಾರಿ ಆಯುಕ್ತರು**

<u>ಇವರಿಗೆ</u>:

1. ರಾಜ್ಯದ ಎಲ್ಲಾ ವಿಭಾಗದ ಅಬಕಾರಿ ಜಂಟಿ ಆಯುಕ್ತರುಗಳಿಗೆ
2. ರಾಜ್ಯದ ಎಲ್ಲಾ ಜಿಲ್ಲೆಗಳ ಅಬಕಾರಿ ಉಪ ಆಯುಕ್ತರುಗಳಿಗೆ
3. ರಾಜ್ಯದ ಎಲ್ಲಾ ಅಬಕಾರಿ ಅಧೀಕ್ಷಕರುಗಳು ಮತ್ತು ಉಪ ಅಧೀಕ್ಷಕರುಗಳಿಗೆ
4. ಕಛೇರಿ ಪ್ರತಿ/ಹೆಚ್ಚಿನ ಪ್ರತಿ

**ಅಬಕಾರಿ ಆಯುಕ್ತರ ಪರವಾಗಿ**